ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ249/2016

ಪಿ. ಡಬ್ಲ್ಯುಃ 3

ಸಿ. ಡಬ್ಲ್ಯುಃ 3

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕಾಮಾಕ್ಷಿ |
| ತಂದೆ/ಪತಿಯ ಹೆಸರು | ಃ | ವೇದಮೂರ್ತಿ |
| ವಯಸ್ಸು | ಃ | 58 ವರ್ಷ |
| ವೃತ್ತಿ | ಃ | ಗೃಹಿಣಿ |
| ವಾಸ | ಃ | ನಾಗಮಂಗಲ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 08-02-2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಚಾಸಾ 1 ನನ್ನ ಮಗಳು, ಚಾಸಾ2 ನನ್ನ ಗಂಡ , 1 ನೇ ಆರೋಪಿ ನನ್ನ ಅಳಿಯ, 2 ನೇ ಆರೋಪಿ ಆತನ ತಾಯಿ.

ನನಗೆ ಮೂರು ಜನ ಮಕ್ಕಳಿದ್ದು, ಅವರೆಲ್ಲಾರಿಗೂ ಮದುವೆಯಾಗಿರುತ್ತದೆ. ನನ್ನ ಕೊನೆ ಮಗಳಾದ ಚಾಸಾ.1 ರವರನ್ನು 1 ನೇ ಆರೋಪಿಗೆ ಕೊಟ್ಟು ನಾಗಮಂಗಲದಲ್ಲಿ ಮದುವೆ ಮಾಡಿದ್ದು, ಮದುವೆ ಸಂದರ್ಭದಲ್ಲಿ 70 ಸಾವಿರ ರೂ.ಗಳನ್ನು ಆರೋಪಿಗೆ ನೀಡಿದ್ದು, ಸಮಾರು 70 ಗ್ರಾಂ. ತೂಕದ ಆಭರಣವನ್ನು ನೀಡಿ ಮದುವೆ ಮಾಡಿರುತ್ತೇನೆ. ಆರೋಪಿಗೆ 30 ಗ್ರಾಂ ದ ತೂಕ ಚೈನ್ ಮತ್ತು ಉಂಗುರವನ್ನು ನೀಡಿರುತ್ತೇವೆ. ಮದುವೆಯಾದ ಒಂದು ತಿಂಗಳ ನಂತರ ಚಾಸಾ 1 ರಿಂದ ಆರೋಪಿಗಳು ಅವರ ಒಡವೆಯನ್ನು ಕಿತ್ತುಕೊಂಡು ಹೊಡೆಯುವುದು ಬಡಿಯುವುದು ಮಾಡಿ ಆಸಿಡ್ ಹಾಕುತ್ತೇನೆ ಎಂದು ಚಾಸಾ1 ರವರಿಗೆ ಬೆದರಿಕೆ ಹಾಕಿರುತ್ತಾರೆ. ನಂತರ ಆರೋಪಿಗಳು ಪುನಃ 50 ಸಾವಿರ ಹಣ ಬೇಕೆಂದು ಆರೋಪಿಗಳು ಕೇಳಿದರು. ಸದರಿ ಹಣವನ್ನು ನಮಗೆ ಹಣವನ್ನು ಕೊಡಲು ಆಗುವುದಿಲ್ಲ ಎಂದು ಹೇಳಿದ್ದೇವು ನಂತರ ಆರೋಪಿಗಳು

ಚಾಸಾ.1 ರವರಿಗೆ ಕಿರುಕುಳ ನೀಡಿರುತ್ತಾರೆ. ಅದೇ ರೀತಿ ನಿನಗೆ ಆಸಿಡ್ ಹಾಕುತ್ತೇವೆ ಎಂದು ಚಾಸಾ.1 ರವರಿಗೆ ಬೆದರಿಕೆ ಹಾಕಿರುತ್ತಾರೆ. ನಂತರ ಅಕ್ಕ ಪಕ್ಕದ ಮನೆಯವರು ಸಮಧಾನ ಮಾಡಿ ಚಾಸಾ.1 ರವರನ್ನು ನಮ್ಮ ಮನೆಗೆ ಕಳುಹಿಸಿಕೊಟ್ಟಿರುತ್ತಾರೆ. ಸುಮಾರು 2 ತಿಂಗಳ ನಂತರ ಕೆ.ಆರ್.ಸಾಗರ ಪೋಲಿಸ್ ಠಾಣೆಗೆ ದೂರು ನೀಡಿರುತ್ತೇವೆ. ಅದೇ ರೀತಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ.ಹೆಚ್.ಆರ್.ವಕೀಲರಿಂದ ಕಾಲಾವಕಾಶ ಕೋರಿದ್ದು ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.